ಅಧ್ಯಕ್ಷರು :- ಅದಕ್ಕೆ CBI ಗೆ ವಹಿಸಬೇಕೆಂದು ಹೇಳುತ್ತೀರಾ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಬೇಡ. ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ ಬೇಡ. ಅವನನ್ನು ವರ್ಗಾವಣೆ ಮಾಡಿ ಸಾಕು.

ಅಧ್ಯಕ್ಷರು :- ಸಚಿವರು ಹೇಳಿದ್ದಾರೆ.

(ಅ) ವಿಷಯ :- ಶಿರಸಿ ಕೆ.ಡಿ.ಸಿ.ಸಿ.ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ತನಿಖಾ ವರದಿಯ ಮೇರೆಗೆ ಕೈಗೊಂಡಿರುವ ಕ್ರಮದ ಬಗ್ಗೆ.

ಶ್ರೀ ಎ. ಸುನೀಲ ಎ. ಹೆಗಡೆ (ಹಳಿಯಾಳ) :- ಮಾನ್ಯ ಅಧ್ಯಕ್ಷರೆ, ಶಿರಸಿ ಕೆ.ಡಿ.ಸಿ.ಸಿ.ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ತನಿಖಾ ವರದಿಯ ಮೇರೆಗೆ ಕೈಗೊಂಡಿರುವ ಕ್ರಮದ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಆರ್.ಎಸ್. ಭಾಗವತ್, ಮಾಜಿ ವಿಧಾನಪರಿಷತ್ ಸದಸ್ಯರು ಹಾಗೂ ನಿರ್ದೇಶಕರು, ಕೆ.ಡಿ.ಸಿ.ಸಿ ಬ್ಯಾಂಕ್ ಇವರು ದಿನಾಂಕ :- 06-10-2008 ರಂದು ಸಹಕಾರ ಸಂಘಗಳ ನಿಬಂಧಕರ ಕಛೇರಿಗೆ ಮನವಿ/ಅರ್ಜಿಯನ್ನು ಸಲ್ಲಿಸಿ, ಕೆನರಾ ಡಿ.ಸಿ.ಸಿ. ಬ್ಯಾಂಕ್ ನಿ., ಶಿರಸಿ ಇದರಲ್ಲಿ ಅವ್ಯವಹಾರಗಳು ಜರುಗಿ, ಬ್ಯಾಂಕಿಗೆ ನಷ್ಟವುಂಟಾಗಿರುವ ಕಾರಣ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರ ಅಡಿಯಲ್ಲಿ ವಿಚಾರಣೆ ಮಾಡುವಂತೆ ವಿನಂತಿಸುತ್ತಾರೆ.

ಶ್ರೀ ಆರ್. ಎಸ್. ಭಾಗವತ್ ಇವರು ನೀಡಿರುವ ಅರ್ಜಿಗಳಲ್ಲಿನ ಆರೋಪಗಳ ಬಗ್ಗೆ ಇಲಾಖಾ ಅಧಿಕಾರಿಗಳ ಮೂಲಕ ಪರಿಶೀಲನೆ ಮಾಡಿದಾಗ ಕೆಲವು ಆರೋಪಗಳಲ್ಲಿ ಸತ್ಯಾಂಶವಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ವಿವರಗಳು ಕೆಳಗಿನಂತಿವೆ.

* ಬ್ಯಾಂಕಿನ ಸಿಬ್ಬಂದಿ ನೇಮಕಾತಿಯಲ್ಲಿ ಎರಡು ಪ್ರಕರಣಗಳಲ್ಲಿ ರೋಸ್ಟರ್ ಉಲ್ಲಂಘನೆ ಮಾಡಿರುವುದು.

* ಕೃಷಿಯೇತರ ಸಾಲಗಳನ್ನು ಮಂಜೂರು ಮಾಡುವಲ್ಲಿ ಹೆಚ್ಚಿನ ಮೊತ್ತದ ಸಾಲವನ್ನು ಮಂಜೂರು ಮಾಡಿದ್ದು ಕೆಲವು ಕೃಷಿಯೇತರ ಸಾಲಗಳಿಗೆ ಸೂಕ್ತ ಭದ್ರತೆ ಪಡೆಯದಿರುವುದು. ನಬಾರ್ಡಿನ ಎಕ್ಸ್‌ಪೋಷರ್ ನಾರ್ಮ್‌ಗಳನ್ನು ಉಲ್ಲಂಘನೆ ಮಾಡಿ ಸಾಲ ಮಂಜೂರು ಮಾಡಿರುವುದು. ಬ್ಯಾಂಕಿನ ಕೆಲವು ನಿರ್ದೇಶಕರುಗಳಿಗೆ ದೊಡ್ಡ ಮೊತ್ತದ ಸಾಲವನ್ನು ಮಂಜೂರು ಮಾಡಿರುವುದು.

ಮೇಲ್ಕಂಡ ಪರಿಶೀಲನಾ ವರದಿಯನ್ವಯ ಬೆಳಗಾವಿ, ಪ್ರಾಂತದ ಸಹಕಾರ ಸಂಘಗಳ ಜಂಟಿ ನಿರ್ಬಂಧಕರು ದಿನಾಂಕ : 15-01-2009 ರಂದು ಈ ಬ್ಯಾಂಕಿನ ಅವ್ಯವಹಾರಗಳ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 64(1) ಪ್ರಕಾರ ವಿಚಾರಣೆಗೆ ಆದೇಶಿಸಿರುತ್ತಾರೆ. ವಿಚಾರಣೆಯನ್ನು 60 ದಿನಗಳೊಳಗಾಗಿ ಮುಗಿಸಲು ವಿಚಾರಣಾಧಿಕಾರಿಗಳಿಗೆ ಸೂಚಿಸಿದ್ದು, ವಿಚಾರಣಾ ವರದಿ ಬಂದೊಡನೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಶ್ರೀ ವಿ. ಸುನೀಲ ವಿ ಹೆಗಡೆ (ಹಳಿಯಾಳ) :- ಆರ್.ಎಸ್. ಭಾಗವತ್ ರವರು ದಿನಾಂಕ 6-10-08 ಕ್ಕೆ ಸರಕಾರಕ್ಕೆ ಮನವಿ ಮಾಡಿದರು. ಅದಕ್ಕಿಂತ ಪೂರ್ವದಲ್ಲಿ ದಿನಾಂಕ 25-09-08 ಕ್ಕೆ ನಾನು ಮಾನ್ಯ ಸಹಕಾರ ಸಚಿವರಿಗೆ ಈ ಬಗ್ಗೆ ಮನವಿ ಪತ್ರ ಕೊಟ್ಟಾಗ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಕೊಟ್ಟಾಗ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಸಹಕಾರ ಸಚಿವರು ಕೂಡಲೇ ಇದರ ಬಗ್ಗೆ ತನಿಖೆ ಆಗಬೇಕೆಂದು ಆದೇಶ ಮಾಡಿದರು ಇದಕ್ಕಾಗಿ ಅವರಿರ್ವರಿಗೆ ನನ್ನ ಅಭಿನಂದನೆಗಳು. ಆದರೆ, ಅವರು ದಿನಾಂಕ 25-09-08 ರಂದು ಹೇಳಿದ್ದರೂ ಕೂಡ ತನಿಖೆ ಶರುವಾಗಿದ್ದು ದಿನಾಂಕ 28-11-08ಕ್ಕೆ. ಅಂದರೆ ಸರ್ವಸಾಧಾರಣವಾಗಿ ಎರಡು ತಿಂಗಳು ನಂತರ ಸಹಕಾರ ಇಲಾಖೆಯವರು ತನಿಖೆ ಶುರು ಮಾಡಿದರು. ನಂತರ ತನಿಖಾವರದಿಯನ್ನು ಕೊಟ್ಟಿದ್ದು ದಿನಾಂಕ 20-12-08 ಕ್ಕೆ. ಅಂದರೆ, ತನಿಖೆ ಆದನಂತರ ವರದಿ ಕೊಡಲಿಕ್ಕೆ ಒಂದು ತಿಂಗಳು ಲೇಟಾಗಿದೆ. 20-12-08 ಕ್ಕೆ ಸಹಕಾರಿ ನಿಬಂಧಕರು ಸಹಕಾರ ಸಂಘದವರು, ನಮ್ಮ ಬೆಳಗಾವಿ ಪ್ರಾಂತ್ಯದ ಜಂಟಿ ನಿಬಂಧಕರಿಗೆ ನೀಡುವ ಆದೇಶದಲ್ಲಿ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಗೆ ಧಕ್ಕೆ ತರುವಂಥ ನಿರ್ಣಯ ಕೈಗೊಂಡಿರುವ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರ ಮೇಲೆ ಜವಾಬ್ದಾರಿ ನಿಗಧಿಪಡಿಸುವುದು ಅವಶ್ಯಕವೆಂದು ಕಂಡು ಬರುತ್ತದೆಂದು ಹೇಳಿ ನಂತರ ಅದಕ್ಕೆ ಶಾಸನಬದ್ದ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದಾರೆ. ಅಂದರೆ, ಯಾವಾಗ ಮೇಲ್ನೋಟಕ್ಕೆ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಗೆ ಧಕ್ಕೆ ತರುವಂಥದ್ದು. ಏಕೆಂದರೆ, ಒಂದು ಬ್ಯಾಂಕಿನ ಪರಿಸ್ಥಿತಿ ಹಾಳಾದರೆ ಧಾರವಾಡದ ಕೆ.ಸಿ.ಸಿ. ಬ್ಯಾಂಕಿನ ಪರಿಸ್ಥಿತಿ ಈ ಬ್ಯಾಂಕಿಗೆ ಆಗುವ ಸಾಧ್ಯತೆಗಳಿರುತ್ತವೆ. ಏಕೆಂದರೆ, ಸಾವಿರಾರು ಪ್ರಾಥಮಿಕ ಸಹಕಾರಿ ಸಂಘಗಳು, ಮಾರ್ಕೆಟಿಂಗ್ ಸಂಘಗಳು, ಬೇರೆ ಬೇರೆ ಬ್ಯಾಂಕ್ಸ್ ಅದರ ಅಧೀನದಲ್ಲಿರುವುದರಿಂದ ಲಕ್ಷಾಂತರ ರೈತರ ಮತ್ತು ಸಾವಿರಾರು ಜನರ ಕೋಟ್ಯಾಂತರ ರೂಪಾಯಿ ಎಫ್.ಡಿ. ಇದೆ. ಸಾವಿರಾರು ಸಿಬ್ಬಂದಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಾರೆ.

ಸ್ವಲ್ಪ ನಿರ್ಲಕ್ಷ್ಯವಾದರೂ ಉತ್ತರ ಕನ್ನಡ ಜಿಲ್ಲೆ ಮತ್ತು ಬ್ಯಾಂಕಿನ ಪ್ರತಿಷ್ಠೆಗೆ ಧಕ್ಕೆ ತರುವಂಥ ಕೆಲಸವಾಗುತ್ತದೆ. ಏಕೆಂದರೆ, ಈಗ ಬಂದಿರುವ ಆಡಳಿತ ಮಂಡಳಿ ಕಳೆದ 7-8 ವರ್ಷಗಳಿಂದ ಆಡಳಿತದಲ್ಲಿದ್ದುದ್ದರಿಂದ ಕೇವಲ ಪಕ್ಷದ ರಾಜಕಾರಣದಿಂದ ಪ್ರೇರಿತರಾಗಿ ಪ್ರತಿಯೊಂದು ವಿಚಾರದಲ್ಲಿ, ಸಾಲ ಕೊಡುವುದಾಗಲಿ, ಸಾಲ ವಸೂಲಿ ಮಾಡುವುದಲ್ಲಾಗಲಿ, ಇವೆಲ್ಲದರಲ್ಲೂ ಕೂಡ ಪಕ್ಷ ರಾಜಕಾರಣಕ್ಕೆ ಯೀಲ್ಡ್ ಆಗಿ ಕೆಲಸ ಮಾಡುತ್ತಿರುವುದರಿಂದ ಬ್ಯಾಂಕಿನ ಹಿತಾಸಕ್ತಿಗೆ ಧಕ್ಕೆ ಆಗುವ ಸಾಧ್ಯತೆ ಇರುತ್ತವೆ. ಅದರಲ್ಲೂ ಮುಖ್ಯವಾಗಿ ಬ್ಯಾಂಕಿನ ಅಧ್ಯಕ್ಷರು ಮತ್ತು ಕೆಲವು ನಿರ್ದೇಶಕರು, ಸಹಕಾರಿ ಸಂಘದ ಇಲಾಖೆಯ ನಿಬಂಧಕರೇ 1997-98 ರಲ್ಲಿ ಆದೇಶ ಹೊರಡಿಸಿದ್ದಾರೆ. ಅದರ ಪ್ರಕಾರ ಪ್ರಾಥಮಿಕ ಸಹಕಾರಿ ಸಂಘಕ್ಕೆ ಮತ್ತು ಮಾರ್ಕೆಟಿಂಗ್ ಸೊಸೈಟಿಗೆ ಯಾವುದೇ ರೀತಿಯಿಂದ ನಾನ್ ಅಫೀಷಿಯಲ್ ಪ್ರತಿನಿಧಿಗಳನ್ನು ಹಾಕಬಾರದು ಎನ್ನುವ ಏನು ಕಾಯಿದೆ ಇದೆ, ಇದನ್ನು ಉಲ್ಲಂಘಿಸಿ ಈ ಹಿಂದಿನ ಚುನಾವಣೆಯಲ್ಲಿ ಈ ಅಧ್ಯಕ್ಷರು ಮತ್ತು ಡೈರೆಕ್ಟರ್ಸ್‌ರವರು, ಈ ಹಿಂದೆಯೂ ಅಧ್ಯಕ್ಷರು ಮತ್ತು ಡೈರೆಕ್ಟರ್ಸ್ ಇದ್ದರು. ಇವರು ಪ್ರಾಥಮಿಕ ಸಹಕಾರಿ ಸಂಘಕ್ಕೆ ಮಾರ್ಕೆಟಿಂಗ್ ಸಂಘಕ್ಕೆ ಕೆ.ಡಿ.ಸಿ.ಸಿ.ಯಿಂದ ನಾಮೀನೇಷನ್ ಆದರು. ನಂತರ ಅಲ್ಲಿಂದ ರಿಟರ್ನ್ ಡೈರೆಕ್ಟರ್ ಆಗಿ ಕೆ.ಡಿ.ಸಿ.ಸಿ. ಗೆ ಬಂದು ಇಲ್ಲಿ ಅಧ್ಯಕ್ಷರು ಮತ್ತು ಡೈರೆಕ್ಟರ್ ಆಗಿದ್ದಾರೆ. ಇದರ ಬಗ್ಗೆ ಕೆಲವೊಂದು ಸೊಸೈಟಿಯವರು ಕೋರ್ಟಿಗೆ ರಿಟ್ ಹಾಕಿದಾಗ ಹೈ ಕೋರ್ಟಿನವರು ಆದೇಶಿಸಿದ್ದಾರೆ. ಅವರ ಸದಸ್ಯತ್ವ ಅನರ್ಹಗೊಳಿಸಬೇಕು, ಸದಸ್ಯರಾಗಿ ಉಳಿಯಲಿಕ್ಕೆ ಅನರ್ಹರಿದ್ದಾರೆ ಎಂದು ಆದೇಶ ಮಾಡಿದ್ದಾರೆ. ಇದನ್ನು ನವೆಂಬರ್ 2008 ರಲ್ಲಿ ಡೆಪ್ಯೂಟಿ ರಿಜಿಸ್ಟ್ರಾರ್ ರವರು ಬ್ಯಾಂಕಿಗೆ ತಿಳಿಸಿದ್ದರೂ ಸಹ ಈ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿ ಗಮನಹರಿಸದೇ, ಮತ್ತು ಈ ಬಗ್ಗೆ ಈಗಾಗಲೇ ಜಂಟಿ ನಿಬಂಧಕರು ಬೆಳಗಾವಿಯಲ್ಲಿ ಕೇಸ್‌ನ್ನು ಆರ್.ಎಸ್.ಭಾಗವತ್‌ರವರು ಹಾಕಿದ್ದರೂ ಸಹ ಅದರ ಬಗ್ಗೆ ಇನ್ನೂ ಜಂಟಿ ನಿಬಂಧಕರಲ್ಲಿ ಇದರ ಬಗ್ಗೆ ಯಾವುದೇ ಆದೇಶವಾಗಿರುವುದಿಲ್ಲ. ಇವರೇನು ಬ್ಯಾಂಕಿನಲ್ಲಿ ಸದಸ್ಯರಾಗಿ ಮುಂದುವರೆಯುತ್ತಿದ್ದಾರೆ ಇದು ಕಾನೂನು ಬದ್ಧವಾಗಿ ಇಲ್ಲದೇ ಇರುವುದರಿಂದ ನಾಳೆ ಯಾವುದಾದರೂ ರೀತಿಯಲ್ಲಿ ಅವ್ಯವಹಾರಗಳನ್ನು ಮಾಡಿದಲ್ಲಿ ಬ್ಯಾಂಕಿನ ಮೇಲೆ ನೇರವಾಗಿ ಪರಿಣಾಮ ಬೀರುವುದರಿಂದ ಬ್ಯಾಂಕಿಗೂ, ಜಿಲ್ಲೆಗೂ, ಸರ್ಕಾರಕ್ಕೂ ಹಾಗೂ ಆ ಭಾಗದ ಶಾಸಕನಾಗಿರುವುದರಿಂದ ನನಗೆ ಕೆಟ್ಟ ಹೆಸರು ಬರುತ್ತದೆ. ಧಾರವಾಡದಲ್ಲಿ ಯಾವ ರೀತಿಯಾಗಿ ಕೆ.ಸಿ.ಸಿ.ಬ್ಯಾಂಕ್ ಆಗಿದೆ, ಇದರ ಅನುಭವ ನಮಗೆಲ್ಲ ಗೊತ್ತಿದೆ. ಈ ರೀತಿ ಬ್ಯಾಂಕ್ ತಪ್ಪು ಹಾದಿ ಹಿಡಿಯುವಂಥ

ಸಾಧ್ಯತೆಗಳಿರುವುದರಿಂದ, ಈಗಾಗಲೇ ಮಾನ್ಯ ಸಚಿವರು 64 (1) ರಡಿಯಲ್ಲಿ ತನಿಖೆಗೆ ಹೇಳಿದ್ದಾರೆ. ಅದಕ್ಕಿಂತ ಭಿನ್ನವಾಗಿ ನಾವು ಹೇಳುವುದೇನೆಂದರೆ, ಅಲ್ಲಿದ್ದಂಥ ಚೇರ್ಮನ್ ಮತ್ತು ಡೈರೆಕ್ಟರ್ಸ್ ಮೇಲೆ ಈಗಾಗಲೇ ಜಂಟಿ ನಿಬಂಧಕರ ಹತ್ತಿರ ಕೇಸ್ ಇದೆ. ಅವರು ಡಿಸ್‌ಕ್ವಾಲಿಫೈ ಆಗಬೇಕಾಗುತ್ತದೆ. ಏಕೆಂದರೆ, ಎರಡು ಜನ ಚೇರ್ಮನ್‌ರವರು ಮತ್ತು ಎರಡು ಜನ ಡೈರೆಕ್ಟರ್‌ಗಳು ಹೊರಗಡೆ ಫೈನಾನ್ಸ್ ನಡೆಸುತ್ತಿದ್ದಾರೆ. ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಹೊರಗಡೆ ಫೈನಾನ್ಸ್ ನಡೆಸುತ್ತಿದ್ದಾರೆ. ಇವರು ಸ್ವತ: ತೆಗೆದುಕೊಂಡಿರುವ ಸಾಲಕ್ಕೆ, ರೈತರಿಗೆ 16% ಗೆ ಸಾಲ, ಇವರಿಗೆ 12 -1/2 % ಗೆ ಬಡ್ಡಿಯಂತೆ ಸಾಲ ಕೊಟ್ಟಿದ್ದಾರೆ. ಈ ರೀತಿಯಾಗಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರಗಳು ನಡೆಯುತ್ತಿವೆ. ಅದಕ್ಕೂ ಮಿಗಿಲಾಗಿ ಅಲ್ಲಿ ವ್ಯವಸ್ಥಾಪಕ ನಿರ್ದೇಶಕರು ಕಳೆದ 5-6 ವರ್ಷಗಳಿಂದ ಪ್ರಭಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಆ ಬ್ಯಾಂಕಿಗೆ ರೆಗ್ಯುಲೆರ್ ಆದಂಥ ವ್ಯವಸ್ಥಾಪಕ ನಿರ್ದೇಶಕರು ಇಲ್ಲ. ಈ ರೀತಿಯ ಅವ್ಯವಹಾರಗಳು ಆ ಬ್ಯಾಂಕಿನಲ್ಲಿ ಕಂಡು ಬರುತ್ತಿರುವುದರಿಂದ ನನ್ನ ವಿನಂತಿ ಏನೆಂದರೆ, ಸಿಬ್ಬಂದಿಗಳ ಹಿತದೃಷ್ಟಿಯಿಂದ, ರೈತರ ಹಿತ ದೃಷ್ಟಿಯಿಂದ, ಬ್ಯಾಂಕಿನ ಠೇವಣಿದಾರರ ಹಿತದೃಷ್ಟಿಯಿಂದ, ಕೂಡಲೇ ಆಡಳಿತ ಮಂಡಳಿಯನ್ನು ನಮ್ಮ ಸಹಕಾರಿ ಕಾಯಿದೆ 65 ರಂತೆ ವಜಾಗೊಳಿಸಿ ಸರ್ಕಾರ ತನ್ನ ಅಧೀನಕ್ಕೆ ಆ ಬ್ಯಾಂಕನ್ನು ತೆಗೆದುಕೊಂಡು ನಂತರ ಆ ಬಗ್ಗೆ ಸಂಪೂರ್ಣವಾದಂಥ ತನಿಖೆ ಯಾಗಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಇದಕ್ಕೆ ಸಹಕಾರ ಸಚಿವರು ಉತ್ತರಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) :- ಈಗ ಶಾಸನ ಬದ್ಧವಾದಂಥ ವಿಚಾರಣೆ ನಡೆಯುತ್ತಿದೆ. 64 ರಡಿಯಲ್ಲಿ ಈಗ ಪ್ರಾರಂಭವಾಗಿದೆ. 60 ದಿನಗಳ ಕಾಲವಕಾಶ ಕೊಟ್ಟಿದೆ. 60 ದಿನಗಳ ಕಾಲವಕಾಶ ಮುಗಿದ ನಂತರ ವರದಿ ಬಂದ ಮೇಲೆ ಖಂಡಿತವಾಗಿ ಏನು ಬರುತ್ತದೆ ಅದನ್ನು ನೋಡಿ ಕಾನೂನು ಬದ್ಧವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಸುನೀಲ ವಿ. ಹೆಗಡೆ (ಹಳಿಯಾಳ) :- ನಾನು ಏನು ಹೇಳುತ್ತೇನೆಂದರೆ, ಈ ಜಂಟಿ ನಿಬಂಧಕರಿಗೆ ಹೈಕೋರ್ಟಿನಿಂದ ಅವರನ್ನು ಡಿಸ್‌ಕ್ವಾಲಿಫೈ ಮಾಡಿ ಎಂದು ಆದೇಶವಾಗಿದೆ. ಅವರು ಪ್ರತಿನಿಧಿಯಾಗಿದ್ದೆ ತಪ್ಪು ಎಂದು ಆಗಿದೆ. ಜಂಟಿ ನಿಬಂಧಕರ ಹತ್ತಿರ ಅದು ಹಲವಾರು ತಿಂಗಳಿನಿಂದ ಪೆಂಡಿಂಗ್ ಇದೆ.

ಡೆಪ್ಯೂಟಿ ರಿಜಿಸ್ಟ್ರಾರ್ ರವರು ಅವರು ಡಿಸ್‌ಕ್ವಾಲಿಫೈ ಆಗಬೇಕೆಂದು ಆದೇಶಿಸಿದ್ದಾರೆ. ಆದರೂ ಇನ್ನೂ ನಿಖಾಲೆಯಾಗಲಿಲ್ಲ. ಹೀಗಾಗಿ ಈ ಕೂಡಲೇ ನಿಖಾಲೆ ಮಾಡುವಂಥ ವ್ಯವಸ್ಥೆ ಯಾಗಬೇಕು. .. ಇದು ಅದೇ ಬ್ಯಾಂಕಿನ ವಿಷಯ. ಆರ್ಡರ್ ಪ್ರಕಾರ ಅವರು ಡಿಸ್‌ಕ್ವಾಲಿಫೈ ಆಗಬೇಕಾಗುತ್ತದೆ. ಮೊದಲು ಆ ಕೆಲಸ ಮಾಡಬೇಕೆಂದು ವಿನಂತಿಸುತ್ತೇನೆ. ಮಾನ್ಯ ಸಹಕಾರ ಸಚಿವರು ಹೇಳಿದ ತನಿಖೆಗೆ ಮೂರು ತಿಂಗಳು ಹೋಗಿದೆ. 64 (1) ರಡಿಯಲ್ಲಿ ಇವರು ವರ್ಷಾನುಗಟ್ಟಲೆ ತೆಗೆದುಕೊಂಡರೆ ಅಲ್ಲಿಯವರೆಗೆ ಆರಾಮರಾಗಿ ಇವರು ಬೇಕಾಬಿಟ್ಟಿಯಾಗಿ ಕೆಲಸ ಮಾಡಿಕೊಂಡು ಹೋಗುತ್ತಾರೆ. ಹೀಗಾಗಿ ಕೂಡಲೇ ಹೈಕೋರ್ಟಿನ ಆದೇಶದಂತೆ ಅವರನ್ನು ಡಿಸ್‌ಕ್ವಾಲಿಫೈ ಮಾಡಬೇಕೆಂದು ಜಂಟಿ ನಿಬಂಧಕರಿಗೆ ಆದೇಶಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಲಕ್ಷ್ಮಣ ಸ ಸವದಿ :- ಹೈಕೋರ್ಟಿನ ಆದೇಶವನ್ನು ತರಿಸಿಕೊಂಡು ನೋಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

(ಇ) ವಿಷಯ:- <u>ಹಾವೇರಿ ತಾಲ್ಲೂಕು ಹಂದಿಗನೂರು ಹಾಗೂ ತಿಮ್ಮಾಪುರ ಏತ ನೀರಾವರಿ ಯೋಜನೆಗಳಿಗೆ ಚಾಲನೆ ನೀಡುವ ಬಗ್ಗೆ.</u>

ಶ್ರೀ ನೆಹರು ಓಲೆಕಾರ (ಹಾವೇರಿ) :- ಮಾನ್ಯ ಉಪಾಧ್ಯಕ್ಷರೆ,ಹಾವೇರಿ ತಾಲ್ಲೂಕು ಹಂದಿಗನೂರು ಹಾಗೂ ತಿಮ್ಮಾಪುರ ಏತ ನೀರಾವರಿ ಯೋಜನೆಗಳಿಗೆ ಚಾಲನೆ ನೀಡುವ ಬಗ್ಗೆ ಮಾನ್ಯ ಚಲಸಂಪನ್ಮೂಲ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :- ಮಾನ್ಯ ಉಪಾಧ್ಯಕ್ಷರೆ,

<u>ಹಂದಿಗನೂರ ಏತ ನೀರಾವರಿ :</u>

ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ ಹಂದಿಗನೂರ ಏತ ನೀರಾವರಿ ಯೋಜನೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಈ ಯೋಜನೆಯ ನೀರಿನ ಮೂಲ ವರದಾ ನದಿಯಾಗಿರುತ್ತದೆ. ಈ ಯೋಜನೆಗೆ 1996-97 ರಿಂದ 2000-01 ರ ಸಾಲಿನ ವರೆಗೆ ಸಣ್ಣ ನೀರಾವರಿ ಇಲಾಖೆಯ ಆಯವ್ಯಯದಲ್ಲಿ